

ಸ್ಫೋಟಗೊಳ್ಳುವುದೆಂದರೆ ಒಳಕುದಿಗಳ ಹೊರಹಾಕಿ ನಿರಾಳವಾಗುವುದು ಎನ್ನುವುದರ ಜೊತೆಗೆ ಬರಿದಾಗುವುದು, ಬಯಲಾಗುವುದು ಎನ್ನುವ ಅರ್ಥಗಳೂ ಇವೆ. ಇದೇ ಕಾರಣಕ್ಕೆ, ಬಯಲಾಗಿ ಉರಿ ಹಿಕ್ಕೆಗಳ ಹೊರಹಾಕಿ, ಆಜು ಬಾಜಿನ ಜೀವ ಸಂಕುಲಗಳ ಬೇರುಗಳನ್ನೇ ಕಳಚಿ ಎಸೆವ ಚೂರುಗಳ ಹೆಕ್ಕುತ್ತ ಬದುಕುವುದಕ್ಕಿಂತ ಒಳಗೊಳಗೇ ಕುದಿದು ಆವಿಯಾಗಿ ತನ್ನದೇ ಅಸ್ತಿತ್ವವನ್ನು ಅಳಿಸುವುದು ಲೇಸೆಂಬ ಹುಚ್ಚು ಅಭಿಪ್ರಾಯದ ಗಾಳಕ್ಕೆ ತನ್ನನ್ನೇ ತಾನು ಸಿಕ್ಕಿಸಿಕೊಂಡ ಅರುಂಧತಿ ಆಸ್ಪತ್ರೆಯ ಅನಾಮಿಕ ರೂಮಿನ ಒಳಗೆ ಸ್ಟ್ರೆಚರ್‌ನಲ್ಲಿ ಮಲಗಿ ಸುಮ್ಮನೆ ಸೂರನ್ನೇ ನೋಡುತ್ತಿದ್ದಳು. ಅವಳಲ್ಲಿ ಯಾವ ತಳಮಳವೂ, ತಹತಹಿಕೆಯೂ, ತುಡಿತವೂ ಇರಲಿಲ್ಲ. ನಡು ಮಧ್ಯಾಹ್ನದಲ್ಲೂ ಆ ರೂಮು ಗೌ ಎನ್ನುವ ಕತ್ತಲೆ ಮುಸುಕನ್ನು ಹೊದ್ದು ಕೂತಿತ್ತು. ಈ ಕೋಣೆಯಲ್ಲಿ ಈ ಪರಿಯ ಕತ್ತಲು ಯಾತಕ್ಕೆ ಎನ್ನುವ ಪ್ರಶ್ನೆ ಆಕೆಯ ಮನಸ್ಸಿನಲ್ಲಿ ಮೂಡಿತಾದರೂ ಕತ್ತಲಲ್ಲೇ ನಡೆವ ಕ್ರಿಯೆಗಳನ್ನು ಬೆಳಕಿನಲ್ಲಿ ಎದುರಿಸಲಾಗದ ಸಂಕಟಕ್ಕೆ ಇಲ್ಲಿನ ಪರಿಕರಗಳ ಆದಿಯಾಗಿ ಎಲ್ಲವೂ ಗಾಢ ನಿಶೆಯಲ್ಲಿ ಅಡಗಿ ಕೂತಿರಬೇಕು ಎಂದು ಆಕೆಗೆ ಅನ್ನಿಸಿತು. ತಕ್ಷಣವೇ 'ಯಾಕೆ ಹೀಗೆ' ಎಂಬ ತುಂಟ ಪ್ರಶ್ನೆಯೊಂದನ್ನು ಕೇಳಬೇಕೆಂಬ ಉತ್ಕಟ ಬಯಕೆ ಹುಟ್ಟಿ ಆ ಕೋಣೆಯ ಸುತ್ತಲೂ ನೋಡಿದಳು. ಅಲ್ಲಿ ಯಾರೂ ಕಾಣಲಿಲ್ಲ. ಅರೆ! ಎಲ್ಲಿ ಹೋದರು ಇವರೆಲ್ಲ ತನ್ನನ್ನು ಹೀಗೆ ಈ ಮಲಗಿಸಿ ಎಂದು ಯೋಚಿಸಿದಳು. ತಾನಿರುವ ಈಗಿರುವ ಸ್ಥಿತಿಯ ಬಗ್ಗೆ ಆಕೆಗೇ ನಾಚಿಕೆಯಾದಂತೆ ಅನ್ನಿಸಿತು ಮತ್ತು ಆ ಗಳಿಗೆಯಲ್ಲಿಯೇ ಈ ಹೆಣ್ಣು ದೇಹದೊಂದಿಗೆ ಇರಬಹುದಾದ ಕಟ್ಟಳೆಗಳೂ ನೆನಪಾಗಿ ಒಂದು ರೀತಿಯ ಅನೂಹ್ಯ ಭಾವವೂ ಆವರಿಸಿತು. ''ಸೀರೆ ಅಷ್ಟೊಂದು ಕೆಳಗೆ ಉಟ್ಟಿದ್ದೀಯಾ? ಡೀಪ್ ನೆಕ್ ಬ್ಲೌಸ್ ಯಾಕೆ?'' ''ಸ್ವಲ್ಪ ಡೀಸೆಂಟಾಗಿ ಸೆರಗು ಹಾಕ್ಕೋಬಾರದ?'' ಎಂಬಂತಹ ನೂರೆಂಟು ಪ್ರಶ್ನೆಗಳ ಹೆಸರಿನ ಕಟ್ಟುಪಾಡುಗಳು ನೆನಪಾದವು. ತಾನೀಗ ಅಪರಿಚಿತ ಬಯಲಿನಲ್ಲಿ ಪೂರ್ತಿ ಬೆತ್ತಲಾಗಿದ್ದೇನೆ; ಆಸ್ಪತ್ರೆಯ ಗೋಡೆಗಳ ನಡುವೆ ಕಾಲು ಬೆರಳ ತುದಿಯಿಂದ ನೆತ್ತಿಯವರೆಗೆ ತಾನು ಹುಟ್ಟುಡುಗೆಯಲ್ಲೇ ಇದ್ದೇನೆ ಅಂದುಕೊಂಡಳು. ಆದರೂ ಮೈಮೇಲೆ ಹೊದಿಸಿರುವ ಹಸಿರು ಗೌನು ಅದು ಸುಳ್ಳು ಎಂದು ಹೇಳುವಂತೆ ತೋರುತ್ತಿತ್ತು. ಬಾಹ್ಯ ಪ್ರಪಂಚದ ರಾಯಭಾರಿಯಂತಿರುವ ಸಣ್ಣ ನೂಲು ಕೂಡ ಈ ದೇಹದ ಮೇಲಿಲ್ಲ ಎಂಬುದು ಅರಿವಾಗಿ ಆಕೆಗೆ ಒಮ್ಮೆಲೆ ಖುಷಿಯಾದಂತೆ ಅನ್ನಿಸಿತು. ಮಾನ ಮರ್ಯಾದೆ, ಶೀಲ ಎಂದು ಹತ್ತಾರು ಹೇಳುತ್ತ ಹೆಂಗಸಿನ ದೇಹವನ್ನೇ ಸಂಸ್ಕೃತಿಯ ಕೇಂದ್ರ ಮಾಡಿದವರ ಮೇಲೆ ಸೇಡು ತೀರಿಸಿಕೊಳ್ಳುತ್ತಿರುವಂತೆ ಅನ್ನಿಸಿತು. ತಾನು ಹೀಗೆ ಒಮ್ಮೆ ಎದ್ದು ಹೊರಗೆ ಹೋಗಿ ಬಂದರೆ ಹೇಗಿರುತ್ತದೆ ಎಂದು ಕಲ್ಪಿಸಿಕೊಂಡಳು. ಬಹುಶಃ ಆಸ್ಪತ್ರೆಯವರೆಲ್ಲ ದಂಗು ಬಡಿದು ಹೋದಾರು, ತೀರಾ ತಲೆ ಕೆಟ್ಟಿದೆಯೆಂದು ತನ್ನನ್ನು ಕಟ್ಟಿ ಹಾಕಿದರೂ ಸಂಶಯವಿಲ್ಲ. ಇನ್ನು ಸೆರಗ ಮರೆಯಲ್ಲಿ ಕಾಣುವ ದೇಹ ತೊಲೆಗಳ ನೋಡಲು ಹಾತೊರೆವ ಗಂಡಸರು ತನ್ನನ್ನು ಹೇಗೆಲ್ಲ ನೋಡಿ ಬೆಚ್ಚಬಹುದು ಎಂದು ನೆನೆಸಿಕೊಂಡು ನಕ್ಕಳು. ಆ ನಗು ವ್ಯಂಗ್ಯದ್ದು ಎಂಬಂತೆ ಭಾಸವಾಗಿ "ಉಫ್" ಎನ್ನುವ ಶಬ್ದ ಹೊರಬಂದು ಅಲ್ಲಿದ್ದ ಮೌನವನ್ನು ಸಣ್ಣಗೆ ಕಲಕಿತು. ಇವಳೆಡೆಯಿಂದ ಹೊರಟ ಸದ್ದಿಗೆ ತುಸು ಕಲಕಿದವಳಂತೆ ಕಂಡ ನರ್ಸು ಒಬ್ಬಳು ಕತ್ತಲಿನಿಂದ ಮೆಲ್ಲಗೆ ಇವಳೆಡೆಗೆ ಹರಿದು ಬಂದು "ಏನು" ಎಂದಳು. 'ಏನೂ ಇಲ್ಲ' ಎನ್ನುವಂತೆ